<u>ಸಾಕ್ಷಿಗೆ ದಿನಾಂಕ *05 -03-2026* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಮೇಲ್ಮನವಿದಾರರ ಪರ ಶ್ರೀ ಪಿ ಬಿ ಹೆಚ್ ವಕೀಲರಿಂದ</u>

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇದ್ದು, ನಾನೇ ಹೇಳಿ ಬರೆಸಿದ್ದು, ಅದರಲ್ಲಿನ ಸಹಿಗಳು ನನ್ನದೇ ಇರುತ್ತವೆ.

ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರುತ್ತೇನೆ.

**ಪಾಟೀ ಸವಾಲು ಃ 2 ನೇ ಎದುರುದಾರರ ಪರ ಶ್ರೀ ಎನ್ ಜೆ ಆರ್ ವಕೀಲರಿಂದ**

ನಾವು ಬೆಂಗಳೂರಿಗೆ ಎಷ್ಟು ಸಲ ದುಡಿಯಲು ಹೋಗಿದ್ದೇವು ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನಾವು ಅಲ್ಲಿಯೂ ಇರುತ್ತೇವೆ ಮತ್ತು ಇಲ್ಲಿಗೂ ಬರುತ್ತೇವೆ ಎಂದು ಹೇಳುತ್ತಾರೆ. ನಾವು ಮೊದಲು 10 ವರ್ಷದ ಹಿಂದೆ ದುಡಿಯಲು ಬೆಂಗಳೂರಿಗೆ ಹೋಗಿದ್ದೇವು. ನಾನು ಕಳೆದ 10 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ದುಡಿಯುತ್ತಾ ಹೋಗಿ ಬರುವುದು ಮಾಡಿರುತ್ತೇವೆ. ನಾನು ಕಳೆದ 10 ವರ್ಷಗಳ ಹಿಂದೆ ಬೆಂಗಳೂರಿಗೆ ದುಡಿಯಲು ಹೋಗಿದ್ದೆ ಎಂದು ನಮೂದಿಸಿರುವುದಿಲ್ಲ. ಕೋವಿಡ್ ಸಮಯದಲ್ಲಿ ನಾವು ಬೆಂಗಳೂರಿನಲ್ಲಿ ಇದ್ದೇವು. ಕೊವಿಡ್ ಮುಗಿದ ನಂತರ 11 ನೇ ದಿವಸಕ್ಕೆ ನಾವು ನಮ್ಮ ಊರಿಗೆ ಬಂದಿರುತ್ತೇವೆ. ಕೋವಿಡ್ ಮುಗಿದ ನಂತರ ನಾವು ನಮ್ಮ ಊರಿನಿಂದ ಬೆಂಗಳೂರಿಗೆ 4 ದಿನಗಳಲ್ಲಿ ಹೋಗಿರುತ್ತೇವೆ. ನಾವು ಬೆಂಗಳೂರಿಗೆ ಹೋದ ನಂತರ 1 ತಿಂಗಳು ಅಲ್ಲೆ ಇದ್ದು ವಾಪಸ್ಸು ಬಂದಿರುತ್ತೇವೆ. ನಾನು ನಮ್ಮ ವಕೀಲರಿಗೆ ಪ್ರಕರಣ ಏನಾಯಿತು ಎಂದು ಕೇಳುತ್ತಾ ಇದ್ದೇನು. ನಾನು ಕೆಳಗಿನ ನ್ಯಾಯಾಲಯದಲ್ಲಿ ಪ್ರಕರಣ ಇದ್ದಾಗ ಕಡತ ವಕೀಲರ ಹತ್ತಿರ ಕೊಟ್ಟಿದ್ದೇನು. ಅವರಿಗೆ ಪ್ರಕರಣ ಏನಾಯಿತು ಎಂದು ಕೇಳಿರುವುದಿಲ್ಲ. ನಾನು ನಮ್ಮ ವಕೀಲರಿಗೆ ಪ್ರಕರಣದ ಬಗ್ಗೆ ಕೇಳಿರುವುದಿಲ್ಲ. ತೀರ್ಪು ನಮ್ಮ ವಿರುದ್ದ ಆಗಿದೆ ಎಂದು 1 ವರ್ಷ 3 ತಿಂಗಳು 13 ದಿನಗಳ ನಂತರ ಗೊತ್ತಾಗಿರುತ್ತದೆ. ನಂತರ ಪ್ರಕರಣದ ದಾಖಲೆಗಳನ್ನು ಬಾಗಲಕೋಟೆ ವಕೀಲರಾದ ಸಾಮನಗೌಡ ರವರ ಹತ್ತಿರ ತೆಗೆಸಿಕೊಂಡಿರುತ್ತೇನೆ. ನಾವು ತುಂಬಾ ವಿಳಂಬ ಮಾಡಿ ಎಸ್ ಬಿ ಪಾಟೀಲ ವಕೀಲರ ಹತ್ತಿರ ಕೊಟ್ಟಿರುತ್ತೇವೆ. ರಾಮಥಾಳ ಗ್ರಾಮದ ಹಿರಿಯರಾದ ವೆಂಕಪ್ಪ ತೊಣಸಿಯಾಳ, ರಾಮನಗೌಡ, ಶೇಖಪ್ಪ ರವರು ಕೂಡಿಸಿದ್ದೇನು. ನಾವು ಯಾವ ಕಾಲಕ್ಕೂ ರಾಮಥಾಳ ಗ್ರಾಮದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ಆಗಲಾರದವರು ಈ ಮೇಲ್ಮನವಿಯನ್ನು ನನ್ನ ಪರವಾಗಿ

ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅರ್ಜಿಯು ಕಾಯ್ದೇಶೀರ ನಡೆಯುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.